ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಂಸತ್ತು

ಪತ್ರಿಕೆಯ ಹೆಸರು : NAME OF THE NEWS PAPER : ವಿಶ್ವವಾಣಿ  ದಿನಾಂಕ : DATE : 22/06/2019

# ತ್ರಿವಳಿ ತಲಾಕ್ ವಿಧೇಯಕ ಮಂಡನೆ

**ದೆಹಲಿ:** ಎನ್‌ಡಿಎ ಸರಕಾರ ತ್ರಿವಳಿ ತಲಾಖ್ ನಿಷೇಧಿಸುವ ವಿಧೇಯಕವನ್ನು ಹೊಸದಾಗಿ ಸಂಸತ್ತಿನಲ್ಲಿ ಮಂಡಿಸಿದ್ದು, ಪ್ರತಿಪಕ್ಷಗಳು 'ಇದು ಸಂವಿಧಾನದ ಉಲ್ಲಂಘನೆ' ಎನ್ನುತ್ತ ತೀವ್ರ ಗದ್ದಲವೆಬ್ಬಿಸಿದವು.




ನರೇಂದ್ರ ಮೋದಿ ಅವರ ಎರಡನೇ ಅವಧಿಯ ಸರಕಾರದ ಮೊದಲ ವಿಧೇಯಕವೇ ಮುಸ್ಲಿಂ ಮಹಿಳೆಯರ (ವಿವಾಹ ಹಕ್ಕುಗಳ ರಕ್ಷಣೆ) ವಿಧೇಯಕ 2019. ಲಿಂಗ ಸಮಾನತೆ ಹಾಗೂ ನ್ಯಾಯದ ದೃಷ್ಟಿಯಿಂದ ಈ ಶಾಸನವು ಅತ್ಯಗತ್ಯ ಎಂದು ವಿಧೇಯಕ ಮಂಡಿಸಿದ ಕಾನೂನು ಸಚಿವ ರವಿಶಂಕರ್ ಪ್ರಸಾದ್ ಹೇಳಿದರು. ಇದು ಧರ್ಮದ ಪ್ರಶ್ನೆಯಲ್ಲ, ಮಹಿಳೆಯರ ಹಕ್ಕಿನ ಪ್ರಶ್ನೆ ಎಂದು ವಿವರಿಸಿದ ಪ್ರಸಾದ್, ದೇಶದಲ್ಲಿ ತ್ರಿವಳಿ ತಲಾಕನ್ನು 543 ಕೇಸುಗಳು ಈಗಾಗಲೇ ವರದಿಯಾಗಿವೆ.

ತ್ರಿವಳಿ ತಲಾಕನ್ನು ಸುಪ್ರೀಂ ಕೋರ್ಟ್ ನಿಷೇಧಿಸಿದ ಬಳಿಕವೂ 200ರಷ್ಟು ಕೇಸುಗಳು ದಾಖಲಾಗಿವೆ ಎಂದು ಹೇಳಿದರು. ವಿಧೇಯಕ ಮಂಡಿಸುವಂತೆ ಸ್ಪೀಕರ್ ಓಂ ಬಿರ್ಲಾ ಹೇಳಿದ ತಕ್ಷಣ ಪ್ರತಿಪಕ್ಷದವರು ಗದ್ದಲ ಆರಂಭಿಸಿದರು.

➔ 8

# ತ್ರಿವಳಿ ತಲಾಕ್ ವಿಧೇಯಕ ಮಂಡನೆ

← ಮೊದಲಪುಟದಿಂದ

ತ್ರಿವಳಿ ತಲಾಕನ್ನು ಸುಪ್ರೀಂ ಕೋರ್ಟ್ ನಿಷೇಧಿಸಿದ ಬಳಿಕವೂ 200ರಷ್ಟು ಕೇಸುಗಳು ದಾಖಲಾಗಿವೆ ಎಂದು ಹೇಳಿದರು.

ವಿಧೇಯಕ ಮಂಡಿಸುವಂತೆ ಸ್ಪೀಕರ್ ಓಂ ಬಿರ್ಲಾ ಹೇಳಿದ ತಕ್ಷಣ ಪ್ರತಿಪಕ್ಷದವರು ಗದ್ದಲ ಆರಂಭಿಸಿದರು. ಕ್ಷಿಪ್ರವಾಗಿ ವಿಚ್ಛೇದನ ನೀಡುವ ತ್ರಿವಳಿ ತಲಾಕ್ ವಿಧೇಯಕವನ್ನು ತಾನು ವಿರೋಧಿಸುತ್ತೇನೆ ಎಂದ ಕಾಂಗ್ರೆಸ್ ಮುಖಂಡ ಶಶಿತರೂರ್, ಇದು ಮುಸ್ಲಿಮರಿಗೆ ಮಾತ್ರವೇ ಅಲ್ಲ, ಪತ್ನಿಯರನ್ನು ತೊರೆಯುವ ಎಲ್ಲ ಪ್ರಕರಣಗಳಿಗೂ ಅನ್ವಯವಾಗಬೇಕು ಎಂದು ಆಗ್ರಹಿಸಿದರು.

**ಓವೈಸಿ ಟೀಕೆ :** ಬಿಜೆಪಿಗೆ ಮುಸ್ಲಿಮ್ ಮಹಿಳೆಯರ ಮೇಲೆ ಎಷ್ಟು ಪ್ರೀತಿಯಿದೆ ಎಂದು ವ್ಯಂಗ್ಯವಾಡಿದ ಎಐಎಂಐಎಂ ಸಂಸದ ಅಸಾದುದ್ದೀನ್ ಓವೈಸಿ, ಆದರೆ ಕೇರಳದ ಶಬರಿಮಲೆ ಪ್ರವೇಶಿಸುವ ಹಿಂದೂ ಮಹಿಳೆಯರ ಹಕ್ಕನ್ನು ವಿರೋಧಿಸಿತು ಎಂದು ಟೀಕಿಸಿದರು.

ತಪ್ಪಿತಸ್ಥ ಮುಸ್ಲಿಂ ಪುರುಷರಿಗೆ 3 ವರ್ಷ ಜೈಲು ಶಿಕ್ಷೆ ಈ ವಿಧೇಯಕದಲ್ಲಿದೆ. ಆದರೆ ಮುಸಲ್ಮಾನೇತರರು ಇದೇ ತಪ್ಪು ಮಾಡಿದರೆ ಕೇವಲ ಒಂದು ವರ್ಷ ಜೈಲು ಶಿಕ್ಷೆ. ಇದು ಸಾಂವಿಧಾನಿಕ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಓವೈಸಿ ಹೇಳಿದರು.